


ಚಿತ್ರ : ಪಿ. ಪುರುಷೋತ್ತಮ ಕಾರಂತ್

ಒಮ್ಮೆ ಭಗವಾನ್ ಬುದ್ಧನು ಭಿಕ್ಷಾಟನೆಯನ್ನು ಮುಗಿಸಿಕೊಂಡು ಬಂದು ಆಹಾರವನ್ನು ಸ್ವೀಕರಿಸಲು ಒಂದು ಮರದ ನೆರಳಲ್ಲಿ ಕುಳಿತನು. ಅಷ್ಟುಹೊತ್ತಿಗೆ ಸರಿಯಾಗಿ ಪೋತಲಿಯ ಎಂಬ ಗೃಹಸ್ಥನೊಬ್ಬನು ಬಂದು ನಮಸ್ಕರಿಸಿ, ಬಳಿಯಲ್ಲಿಯೇ ನಿಂತನು. ಅವನನ್ನು ಸ್ವಾಗತಿಸುತ್ತ ಬುದ್ಧ ಹೇಳಿದ, 'ಬನ್ನಿ ಮನೆಯೊಡೆಯರೇ! ಕುಳಿತುಕೊಳ್ಳಿ." ಪೋತಲಿಯ ಹೇಳಿದ, 'ಭಗವನ್! ನೀವು ನನ್ನನ್ನು ಹಾಗೇಕೆ ಸಂಬೋಧಿಸುತ್ತಿರುವಿರಿ? ನಾನು ಎಲ್ಲವನ್ನೂ ತ್ಯಾಗ ಮಾಡಿಬಿಟ್ಟು ನಿಮ್ಮ ಬಳಿ ಬಂದಿರುವೆ." ತಥಾಗತ ಹೇಳಿದ, "ಇಲ್ಲ ಮನೆಯೊಡೆಯ! ನಿನ್ನ ವ್ಯಕ್ತಿತ್ವ ಮತ್ತು ನಡತೆ ನೀನಿನ್ನೂ ಮನೆಯ ಒಡೆಯ ಎಂಬುದನ್ನೇ ತೋರಿಸುತ್ತಿವೆ." 'ಭಗವನ್! ನಾನು ಜಮೀನು, ಮನೆ ವ್ಯಾಪಾರ, ಧನ-ಧಾನ್ಯ, ಬಂಗಾರದ ಒಡವೆ, ವಸ್ತ್ರಾದಿಗಳು, ಅಷ್ಟೇ ಏಕೆ ಸರ್ವಸ್ವವನ್ನೂ ಮಕ್ಕಳಿಗೆ ಹಂಚಿಬಿಟ್ಟಿರುವೆ. ಕೇವಲ ನನ್ನ ಆಹಾರ ಹಾಗೂ ಉಡುಗೆಗಳಿಗೆ ಬೇಕಾಗುವಷ್ಟನ್ನು ಮಾತ್ರ ಉಳಿಸಿಕೊಂಡಿದ್ದೇನೆ," ಎಂದ ಪೋತಲಿಯ. "ಆದರೆ ಮನೆಯೊಡೆಯ! ನೀನು ಎಲ್ಲವನ್ನೂ ಬಿಟ್ಟಿರುವೆ ಎಂದು ತಪ್ಪು ತಿಳಿದಿದ್ದೀಯ. ವಾಸ್ತವವಾಗಿ ಎಲ್ಲ ವ್ಯವಹಾರಗಳನ್ನು ತ್ಯಾಗ ಮಾಡುವುದೆಂದರೆ ಹಾಗಲ್ಲ!" ಎಂದು ಬುದ್ಧದೇವ ಹೇಳಿದ. "ಹಾಗಾದರೆ ಅದು ಏನೆಂದು ದಯವಿಟ್ಟು ಬಿಡಿಸಿ ಹೇಳಿ" ಎಂದು ಪ್ರಾರ್ಥಿಸಿದ ಪೋತಲಿಯ. ಬುದ್ಧ ಹೇಳಿದ,

'ಮನೆಯೊಡೆಯ! ಲೌಕಿಕ ವ್ಯವಹಾರಗಳ ತ್ಯಾಗದ ನಿಜ ಸ್ವರೂಪವೇನೆಂಬುದನ್ನು ತಿಳಿದುಕೋ. ಹಿಂಸೆಯನ್ನು ಬಿಡಬೇಕು, ಚಾಡಿ ಹೇಳುವುದನ್ನು ಬಿಡಬೇಕು. ಲೋಭ, ಕ್ರೋಧ ಹಾಗೂ ಅಭಿಮಾನಗಳನ್ನು ತ್ಯಜಿಸಬೇಕು. ಮನೆಯಿಂದ ಓಡಿಹೋಗಿ ದೂರ ಉಳಿಯುವುದು ನಿಜವಾದ ತ್ಯಾಗವಲ್ಲ. ಮನದಲ್ಲಿನ ಕಲ್ಮಷಗಳನ್ನು ತ್ಯಜಿಸಬೇಕು. ಎಲ್ಲ ಅನರ್ಥಗಳಿಗೂ ಕಾರಣವಾದ ಈ ಕೆಟ್ಟ ಗುಣಗಳನ್ನು ಬಿಟ್ಟರೆ ಮಾತ್ರ ಧಾರ್ಮಿಕ ಜೀವನ ಸಾಧ್ಯವಾಗುವುದು. ಇವೇ ನಿಜವಾದ ಮನಸ್ಸಿನ ವ್ಯಾಪಾರಗಳು. ಇವುಗಳ ತ್ಯಾಗವೇ ನಿಜವಾದ ತ್ಯಾಗ." ✪

